O.S. ನಂಬರಃ 30/2019
ಪಿ. ಡಬ್ಲ್ಯೂಃ 1

ದಿಃ01-06-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟಿ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್. ಓ. ಎನ್ ವಕೀಲರಿಂದಃ

ನನ್ನ ಕುಟುಂಬದ ಆದಾಯ ಪಿಗ್ಮಿ ಕಲೆಕ್ಟರ್ ಹಾಗೂ ಬೆಳಗಿನ ಸಮಯದಲ್ಲಿ ಹಾಲು ಮಾರಾಟ ಹಾಗೂ ತಿಂಡಿ ತಿನಿಸು ಸರಬರಾಜು ಮಾಡುತ್ತೇನೆ. 2007 ರಿಂದ ತಿಂಡಿ ತಿನಿಸು ಸರಬರಾಜು ಮಾಡುತ್ತೇನೆ. 2001 ರಿಂದ ಹಾಲಿನ ವ್ಯಾಪಾರ ಮಾಡುತ್ತಿದ್ದೇನೆ. 1996 ರಲ್ಲಿ ಕರ್ನಾಟಕ ಇಂಡಸ್ಟ್ರೀಯಲ್ ಬ್ಯಾಂಕಿನ ಪಿಗ್ಮಿ ಕಲೇಕ್ಟರ್ ಆಗಿದ್ದೆ, ಕಳೆದ 6 ವರ್ಷಗಳ ಹಿಂದೆ ಬಿಟ್ಟಿದ್ದೇನೆ. ಸದರಿ ಬ್ಯಾಂಕ್ 19 ವರ್ಷಗಳ ಹಿಂದೆಯೇ ಬಂದ್ ಆಗಿದೆ ಎಂದರೆ ಮಾಹಿತಿ ಇಲ್ಲ. 6-7 ವರ್ಷಗಳಿಂದ ಸುಪ್ರಭಾತ್ ಹಣಕಾಸು ಸಂಸ್ಥೆಯ ಪಿಗ್ಮಿ ಕಲೆಕ್ಟರ್ ಆಗಿದ್ದೇನೆ. ಕರ್ನಾಟಕ ಇಂಡಸ್ಟ್ರೀಯಲ್ ಬ್ಯಾಂಕಿನ ಪಿಗ್ಮಿ ಕಲೇಕ್ಟರ್ ಇದ್ದಾಗಲೇ ನನ್ನ ಹೆಂಡತಿಯ ಹೆಸರಿನಲ್ಲಿ ಸುಪ್ರಭಾತ್ ಹಣಕಾಸು ಸಂಸ್ಥೆಯ ಪಿಗ್ಮಿ ಕಲೇಕ್ಟರ್ನಾಗಿದ್ದೆ. ಕರ್ನಾಟಕ ಇಂಡಸ್ಟ್ರೀಯಲ್ ಬ್ಯಾಂಕಿನ ಪಿಗ್ಮಿ ಕಲೇಕ್ಟರ್ ಹಾಗೂ ಸುಪ್ರಭಾತ್ ಹಣಕಾಸು ಸಂಸ್ಥೆಯ ಪಿಗ್ಮಿ ಕಲೇಕ್ಟರ್ನಾಗಿ ಕೆಲಸ ಮಾಡಿದ ಬಗ್ಗೆ ದಾಖಲೆ ನನ್ನ ಬಳಿ ಇರುತ್ತದೆ ಅವುಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ.

ಹಾಲು ಮಾರಾಟ ಮಾಡುವ ಕುರಿತು ನೋಂದಣಿ ನಾಮೆ ಹೊಂದಿಲ್ಲ, ಮನೆ ಮನೆಗೂ ಹೋಗಿ ಹಾಲು ಹಾಕುತ್ತೇನೆ. ಸುರೇಶ ದುರ್ಗಾ ಶೆಟ್ಟಿರವರ ಬಳಿ ಹಾಲಿನ ವ್ಯಾಪಾರ ಮಾಡುತ್ತಿದ್ದೇನೆ. ಹಾಲಿನ ವ್ಯಾಪಾರ ಮಾಡುತ್ತಿದ್ದ ಬಗ್ಗೆ ಬಾಯಿ ಮಾತಿನ ಸಾಕ್ಷಿ ಬಿಟ್ಟರೆ ದಾಖಲೆ ಇರುವುದಿಲ್ಲ. ಅದೇ ರೀತಿ ತಿಂಡಿ ತಿನಿಸು ವ್ಯಾಪಾರ ಮಾಡುತ್ತಿದ್ದ ಬಗ್ಗೆ

ಬಾಯಿ ಮಾತಿನ ಸಾಕ್ಷಿ ಬಿಟ್ಟರೆ ದಾಖಲೆ ಇರುವುದಿಲ್ಲ. ನನ್ನ ಎಲ್ಲ ವ್ಯಾಪಾರಗಳಿಂದ ತಿಂಗಳಿಗೆ ಅಂದಾಜು ರೂ.25-30 ಸಾವಿರ ಆದಾಯವಿದೆ. ಹಾಲಿನಿಂದ ಪ್ರತಿ ತಿಂಗಳು 7-8 ಸಾವಿರ ಆದಾಯವಿದೆ. ಪಿಗ್ಮಿಯಿಂದ ಪ್ರತಿ ತಿಂಗಳು 15-16 ಸಾವಿರ ಆದಾಯವಿದೆ. ತಿಂಡಿ ತಿನಿಸಿನಿಂದ 4-5 ಸಾವಿರ ಆದಾಯವಿದೆ. 2012 ರಿಂದ ಇನ್‌ಕಮ್ ಟ್ಯಾಕ್ಸ ರಿಟರ್ನ ಸಲ್ಲಿಸುತ್ತಿದ್ದೇನೆ. ಬ್ಯಾಂಕಿನಲ್ಲಿ ಸಾಲ ಮಾಡಿದ್ದರಿಂದ ಐಟಿ ರಿಟರ್ನ ಕೇಳಿದ್ದಕ್ಕೆ ಟ್ಯಾಕ್ಸ ಕುರಿತಾಗಿ ಪ್ರತಿ ವರ್ಷ ರಿಟರ್ನ ಸಲ್ಲಿಸುತ್ತಿದ್ದೇನೆ ಎಂದರೆ ಸರಿಯಲ್ಲ, ಸಾಕ್ಷಿ ಸಾಲ 2016 ರಲ್ಲಿ 2 ನೇ ಮನೆ ಕಟ್ಟಲು ಸಾಲ ಪಡೆದಿದ್ದು, ಟ್ಯಾಕ್ಸ ರಿಟರ್ನ 2012 ರಿಂದ ಮಾಡುತ್ತಿದ್ದೇನೆ ಎಂದು ಹೇಳುತ್ತಾರೆ.

ತಿಂಡಿ ತಿನಿಸು ವ, ಹಾಲಿನ ವ್ಯಾಪಾರ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಹೆಸರಿನಲ್ಲಿ ಪಿಗ್ಮಿ ಮಾಡಿಲ್ಲ ಎಂದರೆ ಸರಿಯಲ್ಲ. ಕರ್ನಾಟಕ ಇಂಡಸ್ಟ್ರೀಯಲ್ ಬ್ಯಾಂಕಿನ ಪಿಗ್ಮಿ ಕಲೇಕ್ಟರ್ ಆಗಿದ್ದಿಲ್ಲ ಎಂದರೆ ಸರಿಯಲ್ಲ. 6-7 ವರ್ಷಗಳಿಂದ ಮಾತ್ರ ಸುಪ್ರಭಾತ್ ಹಣಕಾಸು ಸಂಸ್ಥೆಯ ಪಿಗ್ಮಿ ಕಲೇಕ್ಟರ್ನಾಗಿದ್ದೆ ಎಂದರೆ ಕರ್ನಾಟಕ ಇಂಡಸ್ಟ್ರೀಯಲ್ ಬ್ಯಾಂಕಿನ ಪಿಗ್ಮಿ ಕಲೇಕ್ಟರ್ ಕೆಲಸ ಬಿಟ್ಟ ಮೇಲೆ ಸುಪ್ರಭಾತ್ ಹಣಕಾಸು ಸಂಸ್ಥೆಯಲ್ಲಿ ಮುಂದುವರೆದಿದ್ದೇನೆ ಎಂದು ಹೇಳುತ್ತಾರೆ. ಐಟಿ ರಿಟರ್ನ ನಲ್ಲಿ ನನ್ನ ವ್ಯವಹಾರದ ಕುರಿತು ಹೇಳಿದ್ದೀರಾ ಎಂದರೆ, ವಕೀಲರಿಗೆ ಮಾಹಿತಿ ನೀಡಿದ್ದೇನೆ ಎಂದು ಹೇಳುತ್ತಾರೆ. ನಾನು 10 ನೇ ತರಗತಿಯವರೆಗೆ ಓದಿದ್ದೇನೆ. ಐಟಿ ರಿಟರ್ನ ನಲ್ಲಿ ಏನು ಸಲ್ಲಿಸಿದ್ದಾರೆಂದು ಒಂದು ಪ್ರತಿ ನನಗೆ ನೀಡಿರುತ್ತಾರೆ. ಸದರಿ ಐಟಿ ರಿಟರ್ನನಲ್ಲಿ ಆದಾಯದ ಮೂಲ ಏನು ಎಂದು ಬರೆದಿದ್ದಾರೆ ಎಂದು ನನಗೆ ಅಷ್ಟೊಂದು ಮಾಹಿತಿ ಇಲ್ಲ.

ಟಿಡಿಎಸ್ ಅಕೌಂಟ್ ನಿಂದ ಹಣ ಕಟ್ಟಾಗುತ್ತಿದ್ದು, ಪ್ರತಿ ವರ್ಷಕ್ಕೆ ಎಷ್ಟು ಆಗುತ್ತದೆಂದು ನಾನು ಗಮನಿಸಿಲ್ಲ. 2003-04 ರ ಪೂರ್ವದಲ್ಲಿ ಆದಾಯ ತೆರಿಗೆ ದಾಖಲೆ ಸಲ್ಲಿಸಿಲ್ಲ. 2001 ರಲ್ಲಿ ನನ್ನ ತಂದೆ ಮೃತಪಟ್ಟಿರುತ್ತಾನೆ. ನನ್ನ ತಂದೆ ಮೃತಪಡುವ

ಪೂರ್ವದಲ್ಲಿ ಪಾರ್ಶುವಾಯು ಆಗಿತ್ತು ಎಂದರೆ ಸರಿ, ಆದರೆ ತನ್ನ ಕೆಲಸ ತಾನು ಮಾಡಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ. ನಮ್ಮ ತಂದೆ ಪಾರ್ಶುವಾಯು ಆದ ನಂತರ ಆದಾಯದ ಉದ್ಯೋಗದಲ್ಲಿ ತೊಡಗಿರಲಿಲ್ಲ ಎಂದರೆ ಸಾಕ್ಷಿ ಜವಳಿ ಮತ್ತು ಟೈಲರ್ ಅಂಗಡಿಯನ್ನು ಅವರೇ ನೋಡಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ.

ನನ್ನ ತಂದೆ ಸದೃಢರಿದ್ದಾಗಲೇ ನಮ್ಮ ಸಹೋದರಿಯರ ಮದುವೆಯಾಗಿದೆ. 2002–03 ರ ಪೂರ್ವದಲ್ಲಿ ನಮ್ಮ ತಂದೆಯವರ ಬಾಡಿಗೆ ಅಂಗಡಿಯಲ್ಲಿ ರೆಡಿಮೇಡ್ ಬಟ್ಟೆಯ ವ್ಯಾಪಾರ ಮಾಡುತ್ತಿದ್ದೇವು. 1996 ರವರೆಗೆ ಟೈಲರಿಂಗ್ ಕೆಲಸ ನನ್ನ ತಂದೆ ಮಾಡಿಕೊಂಡು ಬಂದಿದ್ದು, ನಂತರ ನಾನು ರೆಡಿಮೇಡ್ ಬಟ್ಟೆಯ ವ್ಯಾಪಾರ ಮಾಡಲು ಪ್ರಾರಂಭಿಸಿರುತ್ತೇನೆ. ನನ್ನ ತಂದೆ ಟೈಲರಿಂಗ್ ಬಿಟ್ಟ ನಂತರ ಜವಳಿ ಅಂಗಡಿಯ ಉದ್ಯೋಗದ ಕುರಿತು ಮೇಲ್ವಿಚಾರಣೆ ಮಾಡುತ್ತಿದ್ದರು. ರೆಡಿಮೇಡ್ ಅಂಗಡಿ ನನ್ನ ತಂದೆ ಬಾಡಿಗೆ ಪಡೆದ ಅಂಗಡಿಯಾಗಿದ್ದು, ಜವಳಿ ಅಂಗಡಿ ನಮ್ಮ ಸ್ವಂತ ಅಂಗಡಿಯಾಗಿತ್ತು. ನಾಮನಾಥ ಶೆಟ್ಟಿರವರ ಅಂಗಡಿಯನ್ನು ನನ್ನ ತಂದೆ ಬಾಡಿಗೆ ಪಡೆದಿದ್ದರು. ಟೈಲರಿಂಗ್ ಹಾಗೂ ಜವಳಿ ವ್ಯವಹಾರವನ್ನು ಬಾಡಿಗೆ ಪಡೆದ ಅಂಗಡಿಯಲ್ಲಿ ನನ್ನ ತಂದೆ ಮಾಡಿಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ಜವಳಿ ವ್ಯವಹಾರ ಹಾಗೂ ರೆಡಿಮೇಡ್ ವ್ಯವಹಾರಗಳಲ್ಲಿ ಬಹಳ ವ್ಯತ್ಯಾಸವಿಲ್ಲ ಎಂದರೆ ಸರಿಯಲ್ಲ. ನಾನು ರೆಡಿಮೇಡ್ ಅಂಗಡಿ ಮಾಡಿದ ನಂತರ ತಂದೆಯ ಜವಳಿ ಅಂಗಡಿಯಲ್ಲೂ ಸಹ ರೆಡಿಮೇಡ್ ಬಟ್ಟೆ ವ್ಯಾಪಾರ ಪ್ರಾರಂಭಿಸಲಾಗಿದೆ.

ರೆಡಿಮೇಡ್ ಅಂಗಡಿ ವಯಕ್ತಿಕ ನಾತೆಯಿಂದ ಬಾಡಿಗೆ ಪಡೆದಿಲ್ಲ, ತಂದೆ ಮುಖಾಂತರ ನಾನು ಬಾಡಿಗೆ ಮುಂದುವರೆಸಿದ್ದೇನೆ. ನನ್ನ ರೆಡಿಮೇಡ್ ಬಟ್ಟೆ ವ್ಯವಹಾರ ತಂದೆಯ ಲೆಕ್ಕದಲ್ಲಿ ಇರಲಿಲ್ಲ, ಅದು ನನ್ನ ಸ್ವಂತ ವ್ಯವಹಾರವಾಗಿತ್ತು. ಸದರಿ ವ್ಯವಹಾರ ನನ್ನ ಸ್ವಂತ ವ್ಯವಹಾರವೆಂದು ತೋರಿಸಲು ಪುರಸಭೆ ದಾಖಲೆಗಳು ಹಾಗೂ ನನ್ನ ಹೆಸರಿನಲ್ಲಿ ಬ್ಯಾಂಕ್ ಖಾತೆ ಇತ್ತು. ಆ ಕುರಿತು ದಾಖಲೆಗಳು ನನ್ನ ಬಳಿ ಇವೆ. 1988 ರ ಮೊದಲೇ

ನನ್ನ ತಂಗಿ ವೀಣಾ ರವರ ಮದುವೆಯಾಗಿದೆ. ಜವಳಿ ಬಟ್ಟೆಯ ವ್ಯವಹಾರದ ಅಂಗಡಿಯಲ್ಲಿಯೇ ತದನಂತರ ರೆಡಿಮೇಡ್ ಬಟ್ಟೆ ಅಂಗಡಿ ಪ್ರಾರಂಭಿಸಲಾಗಿದೆ ಎಂದರೆ ಸರಿಯಲ್ಲ.

1998 ರಲ್ಲಿ ನನ್ನ ಮದುವೆಯಾಗಿದೆ. ನನ್ನ ಮದುವೆಯ ಪೂರ್ವದಲ್ಲಿ ನಾನು ಮತ್ತು ನನ್ನ ಸಹೋದರರಾದ ಪ್ರಕಾಶ ಹಾಗೂ ಗಣೇಶ ಒಂದೇ ಮನೆಯಲ್ಲಿದ್ದೇವು ಎಂದರೆ ಸರಿ. ನನಗೆ ಇಬ್ಬರು ಮಕ್ಕಳು. ಎರಡನೇ ಮಗು ಆಗುವವರೆಗೂ ಒಟ್ಟಿಗೆ ವಾಸಿಸಿದ್ದೇವೆ ಎಂದರೆ ಸರಿ. 2001 ರಂದು ನನಗೆ ಎರಡನೇ ಮಗು ಜನಿಸಿದೆ. 2005 ರವರೆಗೂ ಮೂಲ ಮನೆಯಲ್ಲಿದ್ದೇವು ಎಂದರೆ ಸರಿ. ನಮ್ಮ ಊಟೋಪಚಾರ ಒಂದೇ ಕಡೆ ಇತ್ತು ಎಂದರೆ ಸರಿ, ಸಾಕ್ಷಿ ಮುಂದುವರೆದು ಕುಟಂಬಕ್ಕೆ ಬೇಕಾದ ಹಣಕಾಸನ್ನು ಪಾಲು ಮಾಡಿಕೊಳ್ಳುತ್ತಿದ್ದೇವು ಎಂದು ಹೇಳುತ್ತಾರೆ. ಆ ಸಮಯದಲ್ಲಿ ನನಗೆ ಯಾವುದೇ ಆದಾಯದ ಮೂಲ ಇರಲಿಲ್ಲ, 3 ಮತ್ತು 6 ನೇ ಪ್ರತಿವಾದಿಯರು ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ತಂದೆ-ತಾಯಿ ಜೀವಂತವಿದ್ದರು ಎಂದರೆ ಸರಿ. 3 ಮತುತ 6 ನೇ ಪ್ರತಿವಾದಿಯರು ಹಾಗೂ ಕುಟುಂಬದ ಅಂಗಡಿಯಿಂದ ಬಂದ ಹಣ ತಂದೆಯವರ ಹತ್ತಿರ ಶೇಖರಣೆಯಾಗುತ್ತಿತ್ತು ಎಂದರೆ ಅವರು ನೀಡಿದ್ದಾರೋ ಇಲ್ಲವೂ ಗೊತ್ತಿಲ್ಲ ಎಂದು ಹೇಳುತ್ತಾರೆ. 2005 ರ ವರೆಗೆ ಎಲ್ಲರೂ ಕೂಡಿಯೇ ವಾಸವಾಗಿದ್ದೇವು ಎಂದರೆ ಸರಿ.

ಪಿತ್ರಾರ್ಜಿತವಾಗಿ ಬಂದ ಮನೆ ಹಂಚಿನಿಂದ ಕೂಡಿತ್ತು ಎಂದರೆ ಅದಾಗಲೇ ಅದನ್ನು ತೆಗೆದು 1990-91 ರಲ್ಲಿ ಆರ್ ಸಿಸಿ ತಂದೆ ಹಾಕಿಸಿದ್ದರು ಎಂದು ಹೇಳುತ್ತಾರೆ. ಆರ್ ಸಿಸಿ ಸಮಯದಲ್ಲಿ ತೆಗೆದ ಕಟ್ಟಿಗೆಯನ್ನು ಅದೇ ಮನೆಗೆ ಉಪಯೋಗಿಸಿ, ಸ್ವಲ್ಪ ಮಾರಾಟ ಮಾಡಿದ್ದಾರೆ. ಮೂಲ ಮನೆಗೆ ಬೆಲೆಬಾಳುವ ಸಾಗವಾನಿ ಮರದ ಕಟ್ಟಿಗೆ ಅಳವಡಿಸಿತ್ತು ಎಂದರೆ ಸರಿ. ಅದನ್ನು ಯಾರಿಗೂ ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲನ್ನು  ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.